ಅಲ್ಲೇ ಇದ್ದುದರಿಂದ ಪರಿಹಾರ ಕೊಡುವುದಕ್ಕೆ ಕೂಡಲೇ ವ್ಯವಸ್ಥೆಯನ್ನು ಅವರು ಮಾಡುತ್ತಾರೆ. ಶಾಶ್ವತವಾಗಿ ಕೋಮುಗಲಭೆ ಆಗದ ರೀತಿಯಲ್ಲಿ ಪರಿಹಾರವನ್ನು ಕಂಡು ಹಿಡಿಯಲಿಕ್ಕೆ ಶಾಂತಿಕೊಪ್ಪದಲ್ಲಿ ಜನರು ಮೀಟಿಂಗ್‌ನ್ನು ಮಾಡಿದ್ದಾರೆ. ಮೈಸೂರಿನಲ್ಲೂ ಸಹ ಸುಮಾರು ನಾಲ್ಕೈದು ಸಾವಿರ ಜನರು ಸೇರಿಕೊಂಡು ಮೀಟಿಂಗ್ ಮಾಡಿದ್ದಾರೆ. ಕೋಮು ಗಲಭೆಗಳಿಗೆ ಅವಕಾಶವಾಗದ ರೀತಿಯಲ್ಲಿ ಎಲ್ಲರೂ ನಡೆದುಕೊಳ್ಳಬೇಕು. ಪೋಲೀಸರು ಸಹ ಈ ಗಲಭೆಗಳನ್ನು ತಡೆಯುವುದಕ್ಕೆ ಸಾಕಷ್ಟು ಕೆಲಸ ಮಾಡಿದ್ದಾರೆ. ಒಂದು ಕಡೆ ಜಮಾಯೀತ್ ಇಸ್ಲಾಮ್‌ನವರು ಮತ್ತೊಂದು ಕಡೆ ವಿಶ್ವ ಹಿಂದೂ ಪರಿಷತ್ ನವರು ಜಾತಿ ವಾದವನ್ನು ಇಟ್ಟುಕೊಂಡು ಭಾಷಣವನ್ನು ಮಾಡುತ್ತಾರೆಂದು ತಿಳಿದು ಬಂದಿದೆ ಯಾರು ಇಂತಹ ಪ್ರಚೋದನೆ ಮಾಡುವ ರೀತಿಯಲ್ಲಿ ಮಾತನಾಡುತ್ತಾರೋ ಅವರ ಮೇಲೆ ಪೋಲೀಸಿನವರು ಮತ್ತು ಸರ್ಕಾರದವರು ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳುತ್ತಾರೆ. ಪೋಲೀಸಿನವರು ಅಲ್ಲಿ ನಡೆದಂಥ ಗಲಭೆ ವಿಷಯದಲ್ಲಿ ಬಹಳ ಜಾಗರೂಕತೆಯಿಂದ ನಡೆದುಕೊಂಡಿದ್ದಾರೆ. ಗಲಭೆಗಳು ಆಗದೇ ಇರುವುದಕ್ಕೆ ಅಲ್ಲಿನ ಜನರು ಪೋಲೀಸರ ಜೊತೆಯಲ್ಲಿ ಸಹಕಾರ ಮಾಡಬೇಕು ಶಾಶ್ವತವಾಗಿ ಇಂಥ ಘಟನೆಗಳು ಆಗದ ರೀತಿಯಲ್ಲಿ ನಡೆಯುವುದಕ್ಕೆ ಮಾನ್ಯ ಸದಸ್ಯರು ನೀಡುವ ಸಲಹೆಗಳನ್ನು ಕೇಳಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಡುತ್ತೇನೆ.

ನಿಯಮ ೩೩ಳಿರ ಮೇರೆಗೆ ಚರ್ಚೆ

ಅಧ್ಯಕ್ಷರು.— ಈಗ ೩೩ಳಿರ ನಿಯಮದ ಮೇಲೆ ಚರ್ಚೆ. ಮಾನ್ಯ ಶ್ರೀ ಕೆ. ಎಲ್. ಶಿವಲಿಂಗೇಗೌಡರು.

(ಮಾನ್ಯ ಶ್ರೀ ಕೆ. ಎಲ್. ಶಿವಲಿಂಗೇಗೌಡರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು.— ಶ್ರೀ ವಸಂತ ಬಂಗೇರರವರು,

1) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರಕಾರಿ ಜಮೀನು ಹಾಗೂ ಅರಣ್ಯ ಭೂಮಿಯನ್ನು ಅಕ್ರಮಣ ಮಾಡಿದ ಕಂಟುಂಬಗಳ ಬಗ್ಗೆ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).— ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಸುಮಾರು ೮,೦೦೦ಕ್ಕೂ ಮಿಕ್ಕಿ ಕಂಟುಂಬಗಳು, ಸರಕಾರಿ ಜಮೀನು ಹಾಗೂ ಅರಣ್ಯ ಭೂಮಿಯಲ್ಲಿ ಸುಮಾರು ೨೫ ರಿಂದ ೩೦ ವರ್ಷಗಳ ಹಿಂದಿನಿಂದಲೂ ಅಕ್ರಮಣ ಮಾಡಿ ಹಟ್ಟಿ, ಕೊಟ್ಟಿಗೆ, ಮನೆಗಳನ್ನು ಕಟ್ಟಿಕೊಂಡು ಕೃಷಿ ಮಾಡಿ ಜೀವನ ಸಾಗಿಸುತ್ತಾ ಇದ್ದಾರೆ. ಈ ರೀತಿ ಅಕ್ರಮಣ ಮಾಡಿ ಕೃಷಿ ಮಾಡಿ ಜೀವನ ಸಾಗಿಸುತ್ತಿರುವ ಕಂಟುಂಬಗಳಲ್ಲಿ ಕೆಲವರು ತಾವು ಅಕ್ರಮಣ ಮಾಡಿದ ಸ್ಥಳಗಳಲ್ಲಿ ಗೇರು ಕೃಷಿಯನ್ನು ಮಾಡಿದ್ದರೂ, ಪ್ರಕೃತ ಅವುಗಳಲ್ಲಿ ಫಲ ಬರುತ್ತಿದ್ದರೂ ಕೂಡಾ, ತಾವು ಕಷ್ಟಪಟ್ಟು ಬೆಳೆಸಿದ ಗೇರು ಮರಗಳ ಫಲವನ್ನು ಅರಣ್ಯ ಇಲಾಖೆಯ ಅಧಿಕಾರಿಗಳ ಕೃಪೆಯಿಂದ ಕೆಲವು ವರ್ಷಗಳಿಂದ ಈ ಪ್ರಯೋಜನಾರ್ಥಿಗಳು ಫಲವನ್ನು ಪಡೆಯುವುದಕ್ಕೆ ವಿಫಲರಾಗಿರುತ್ತಾರೆ, ಕಾರಣ, ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯ ಇಲಾಖೆಗೆ ಸಂಬಂಧಿಸಿದ ಗೇರು ತೋಟಗಳನ್ನು ಪ್ರತಿವರ್ಷವೂ ಹರಾಜು ಮಾಡುತ್ತಿದ್ದಾರೆ. ಹೀಗೆ ಪಡೆದುಕೊಂಡ ಕಂಟ್ರಾಕ್ಟ್‌ದಾರರು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಂ ಶಾಮಿಲಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಕ್ರಮಣ ಮಾಡಿ ಜೀವನ ಸಾಗಿಸುತ್ತಿರುವ ಕುಟುಂಬಗಳು ಬೆಳೆಸಿದ ಗೇರು ಕೃಷಿಯನ್ನು ಬಲಾತ್ಕಾರದಿಂದ ಕೊಯ್ದು ಸಾಗಿಸುತ್ತಿದ್ದಾರೆ. ಅಕ್ರಮಣಕಾರರಂ ಬೆಳೆಸಿದ ಗೇರು ಬೆಳೆಯನ್ನು ಇಲಾಖೆಯವರು ಮತ್ತು ಕಂಟ್ರಾಕ್ಟ್‌ದಾರರು ಕೊಯ್ಯುವ ಸಂದರ್ಭದಲ್ಲಿ ಸದ್ರಿ ಗೇರು ಬೆಳೆಯನ್ನು ಸರ್ಕಾರ ಹರಾಜು ಮಾಡಲಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಗದರಿಸಿ ಅದರ ಫಲವನ್ನು ಬಲಾತ್ಕಾರವಾಗಿ ಕೊಂಡು ಹೋಗುತ್ತಿದ್ದಾರೆ. ಈ ರೀತಿ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಕಂಟ್ರಾಕ್ಟ್‌ದಾರರ ಬಲಾತ್ಕಾರದಿಂದ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಾವಿರಾರು ಬಡ ಕುಟುಂಬಗಳು ಅನ್ಯಾಯಕ್ಕೆ ಹಾಗೂ ನಷ್ಟಕ್ಕೆ ಒಳಗಾಗಿವೆ. ಈ ಬಡವರಿಗೆ ಆದ ಅನ್ಯಾಯಕ್ಕೆ ನ್ಯಾಯ, ಮತ್ತು ಅವರಿಗಾದ ನಷ್ಟವನ್ನು ತುಂಬಬೇಕಾಗಿದೆ. ಈ ಪ್ರಕರಣದಲ್ಲಿ ಶಾಮಿಲಾದ ಅಧಿಕಾರಿಗಳ ಹಾಗೂ ಕಂಟ್ರಾಕ್ಟ್‌ದಾರರ ವಿರುದ್ಧ ಸೂಕ್ತ ಕ್ರಮಂ ಕೈಗೊಂಡು

ಸತತವಾಗಿ ಮೂರು ನಾಲ್ಕು ವರ್ಷಗಳಿಂದ ತಾವು ಬೆಳೆಸಿದ ಗೇರು ಕೃಷಿಯನ್ನು ಬಲಾತ್ಕಾರದಿಂದ ಕೊಯ್ಸುಕೊಂಡ ಸದ್ರಿ ಪ್ರಯೋಜನಾರ್ಥಿಗಳಿಗೆ ತುಂಬಲಾರದ ನಷ್ಟವಾಗಿರುವುದನ್ನು, ಅವರಿಗಾದ ನಷ್ಟವನ್ನು ಭರಿಸುವಲ್ಲಿ ಮಾನ್ಯ ಅರಣ್ಯ ಇಲಾಖೆಯು ಸಚಿವರು ಉತ್ತರಿಸುವಿರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೇ ಈ ಅತಿಕ್ರಮ ಮಾಡಿಕೊಂಡು ಬೇಸಾಯ ಮಾಡುತ್ತಿರತ್ಕಂಥವರ ಭೂಮಿಯನ್ನು ರೆಗ್ಯುಲರೈಸ್ ಮಾಡುವ ವಿಚಾರದ ಬಗ್ಗೆ ವಿಷಯವನ್ನು ಈ ಜಾಯಿಂಟ್ ಸೆಲೆಕ್ಟ್ ಸಮಿತಿಯಂ ಮುಂದೆ ಇದೆ. ಈಗ ಎರಡು ದಿವಸಗಳಿಂದ ಆ ಸಮಿತಿಯು ಸಭೆ ಸೇರಿ ಕಾರ್ಯಕಲಾಪಗಳನ್ನು ನಡೆಸುತ್ತಿದೆ. ಒಂದು ವಾರದೊಳಗಾಗಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸುತ್ತದೆ. ಆ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.— ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಕೂಡ ಇದ್ದಾರೆ. ಅರಣ್ಯ ಭೂಮಿಯಲ್ಲಿ ಹಿಂದಿನಿಂದಲೂ ಬೆಳೆಗಳನ್ನು ಬೆಳೆದುಕೊಂಡು ಬಂದವರನ್ನು ಈಗ ಇಲಾಖೆಯವರು ಬಲಾತ್ಕಾರವಾಗಿ ಕೊಂಡೊಯ್ಯುತ್ತಿದ್ದಾರೆ. ಇದು ನಿಲ್ಲ ಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಬಗ್ಗೆ ಜಾಯಿಂಟ್ ಸೆಲೆಕ್ಟ್ ಸಮಿತಿಯ ಅಭಿಪ್ರಾಯದ ನಂತರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈಗಾಗಲೇ ಹೇಳಿದ್ದೇನೆ.

2) ಕರ್ನಾಟಕದಲ್ಲಿ ನ್ಯಾಯಾಂಗ ಇಲಾಖೆಯಲ್ಲಿ ವರ್ಗಾವಣೆಯಾಗಿ ಕೆಲಸ ಮಾಡುವ ಜಿಲ್ಲಾ ಮಂತ್ತು ಇತರ ನ್ಯಾಯಾಧೀಶರವರಿಗೆ ಬಂಗಲೆ ಕಾರು ಮತ್ತಿತರ ಅನುಕೂಲ ಕೊಡುವ ಬಗ್ಗೆ

ಶ್ರೀ ಆರ್. ವೆಂಕಟರಾವಪ್ಪ (ಮಂಗಳಬಾಗಿಲು).— ಕರ್ನಾಟಕದಲ್ಲಿನ ನ್ಯಾಯಾಂಗ ಇಲಾಖೆಯಲ್ಲಿ ಕೆಲಸ ಮಾಡುವ ಜಿಲ್ಲಾ ಮತ್ತು ಇತರ ನ್ಯಾಯಾಧೀಶರನ್ನು ಲೇಬರ್ ಕೋರ್ಟ್ ಮತ್ತು ಲೇಬರ್ ಟ್ರಿಬ್ಯೂನಲ್‌ಗಳಿಗೆ ವರ್ಗಾಯಿಸಿದ್ದಾರೆ. ಅವರಿಗೆ ೬ ತಿಂಗಳ ಒಂದೆರೇ ಸರ್ಕಾರ ಕಾರು, ಬಂಗಲೆ ಮತ್ತಿತರ ಅನುಕೂಲಗಳನ್ನು ಕೊಡುವುದಾಗಿ ಒಪ್ಪಿ ಸರ್ಕಾರಿ ಆದೇಶವನ್ನು ಹೊರಡಿಸಿದ್ದರೂ ಇನ್ನೂ ಕೊಡದೆ ನ್ಯಾಯಾಂಗ ಇಲಾಖೆಯ ಅಧಿಕಾರಿಗಳಿಗೆ ತೊಂದರೆಯಾಗಿರುವುದಲ್ಲದೆ ಲೇಬರ್ ಕೋರ್ಟ್ ಸುಗಮವಾಗಿ ನಡೆಯಲು ತೊಂದರೆಯಾಗಿರುವುದರಿಂದ ಮತ್ತು ಅವರು ನಿರ್ವಹಿಸುತ್ತಿರುವ ಕಾರ್ಯ ಬಹಳ ಜವಾಬ್ದಾರಿಯುತವಾದುದರಿಂದ ಸರ್ಕಾರ ಅವರಿಗೆ ಕೊಟ್ಟಿರುವ ಆದೇಶವನ್ವಯ ಆಜ್ಞೆ ಜಾರಿಗೊಳಿಸಿ, ಅವರಿಗೆ ನ್ಯಾಯಯುತವಾಗಿ ನೀಡಬೇಕಾದ ಅನುಕೂಲತೆಗಳನ್ನು ಕೊಡುವುದರ ಬಗ್ಗೆ ತುರ್ತು ಮಂಜೂರಾತಿ ನೀಡಬೇಕೆಂದು ಕೋರಿ, ಈ ಪ್ರಸ್ತಾವನೆಯನ್ನು ತರಲಿಚ್ಛಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೇ, ಈಗಾಗಲೇ ಜ್ಯೂಡಿಷಿಯಲ್ ಆಫೀಸರ್‌ಗಳಿಗೆ ಕಾರು ಕೊಡತಕ್ಕಂಥ ಆಜ್ಞೆಯನ್ನು ಪಾಡಿದೆ. ಅಂತೆಯೇ ಇದನ್ನು ಮಾನ್ಯ ಸದಸ್ಯರು ಹೇಳಿದಂತೆಲೇಬರ್ ಕೋರ್ಟಿನವರಿಗೂ ಕೊಡುವ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

3. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಹೆಂಚಿನ ಕಾರ್ಖಾನೆಗಳಲ್ಲಿ ಅಧಿಕ ಕಾರ್ಮಿಕರು ಮುಷ್ಕರ ನಡೆಸುತ್ತಿರುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಹೆಂಚಿನ ಕಾರ್ಖಾನೆಗಳ ಏಳು ಸಾವಿರಕ್ಕೂ ಅಧಿಕ ಕಾರ್ಮಿಕರು ಮುಷ್ಕರ, ಧರಣಿ ನಡೆಸುತ್ತಿದ್ದಾರೆ. ಮಾಲೀಕರಿಗೂ ಕಾರ್ಮಿಕರಿಗೂ ಇರುವ ಬೇಡಿಕೆ. ಈಡೇರಿಕೆಯ ಬಗ್ಗೆ ಇದು ನಡೆಯುತ್ತಿದೆ. ಇಪ್ಪರಲ್ಲಿ ಲಾರಿ ಚಾರ್ಜು ಬಂಧನಗಳೂ ಆದ ವರದಿಗಳಿವೆ. ಹೆಂಚಿನ ಕಾರ್ಮಿಕರ ತಂಟ್ಟಿಭತ್ಯೆ ಸಹಿತ ಕನಿಷ್ಠ ವೇತನದ ಶೇಫ್ಟು ಪ್ರಕಟಣೆಗಾಗಿ ಕೂಡ ಕಾರ್ಮಿಕರು ಒತ್ತಾಯ ತಂದಿರುತ್ತಾರೆ. ಈಗ ದ. ಕನ್ನಡದಲ್ಲಿ ಇದು ವಿಕೋಪಕ್ಕೆ ಹೋಗಿರುತ್ತದೆ, ಈ ಕುರಿತು ಕಾರ್ಮಿಕ ಮತ್ತು ಗೃಹ ಸಚಿವರ ಗಮನ ಸೆಳೆಯುತ್ತೇನೆ.